ನಿರಂತರವಾಗಿ ಬ್ಯುಸಿಯಾಗಿದೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಘನಘೋರ ಎಡವಟ್ಟು ಇದು. ನಾನೊಬ್ಬ ಜಮೀನ್ದಾರನ ಮಗನಾಗಿ ನಕ್ಸಲರನ್ನು ಏಕೆ ಬೆಂಬಲಿಸುತ್ತೇನೆಂದು ಅನೇಕರು ಅಚ್ಚರಿಯಿಂದ ಮಾತನಾಡಿಕೊಳ್ಳುತ್ತಾರೆ. You know ಫ್ರಾನ್ಸ್, ರಷ್ಯಾ, ಅಮೆರಿಕ ಮುಂತಾದ ಕ್ರಾಂತಿಗಳ ಮುಂದಾಳತ್ವವನ್ನು ವಹಿಸಿಕೊಂಡವರು ಸಮಾಜದ ಉನ್ನತ ವರ್ಗದವರೇ ಆಗಿದ್ದರು. ಅವರು ಮಜವಾಗಿಯೇ ಬದುಕು ನಡೆಸಬಹುದಿತ್ತು. ಆದರೆ, ಸಮಾಜದ ಸಾಮಾನ್ಯ ಜನರ ಒಳಿತಿಗಾಗಿ ವ್ಯವಸ್ಥೆಯೊಂದಿಗೆ, ಆಡಳಿತ ಶಾಹಿಯೊಂದಿಗೆ ಸಂಘರ್ಷಕ್ಕೆ ಇಳಿದರು. ಅಷ್ಟೇಕೆ, ನಮ್ಮ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನೇ ತೆಗೆದುಕೊಳ್ಳಿ. ಗಾಂಧಿ, ನೆಹರು, ಪಟೇಲ್, ತಿಲಕ್, ಗೋಖಲೆ, ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ್ ರಾಯ್, ಸುಭಾಷ್ ಚಂದ್ರ ಬೋಸ್ ಮುಂತಾದವರು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಗುಲಾಮರಾಗಿಯೇನೂ ಇರಲಿಲ್ಲ. ನಿಜವಾದ ಗುಲಾಮರಾಗಿದ್ದವರು ದೇಶದ ಸಾಮಾನ್ಯ ಜನರು. ಇವರೆಲ್ಲ ತಮ್ಮ ಬದುಕುಗಳನ್ನು ತ್ಯಾಗ ಮಾಡಿ ಜನ ಸಾಮಾನ್ಯರ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅದಿರಲಿ, ನಿಮ್ಮ ದೌರ್ಜನ್ಯ ಖಂಡನೀಯ. ಇದರ ಕುರಿತು ನಾನು ಪ್ರೆಸ್‌ಗೆ ಹೋಗುವುದಿಲ್ಲ. ಏಕೆಂದರೆ ನೀವು ಪ್ರಾಮಾಣಿಕರೆಂದು ಹೆಸರು ಪಡೆದಿದ್ದೀರಿ. ಆದರೂ ನೆನಪಿರಲಿ, ನಾವು ಏನನ್ನು ಎಸೆಯುತ್ತೇವೆಯೋ ಅದೇ ಹಿಂತಿರುಗಿ ನಮ್ಮ ಬಳಿಗೆ ಬರುತ್ತದೆ. ಇಂಗ್ಲಿಷ್ ನಲ್ಲಿ ಅದಕ್ಕೆ 'boomerang' ಎನ್ನುತ್ತೇವೆ' ನರಸಿಂಹ ನಾಯ್ಡುವಿನ ಮಾತುಗಳಲ್ಲಿ ನಿಖರತೆ ಮತ್ತು ಖಚಿತತೆ ಎರಡೂ ಮೇಳೈಸಿದ್ದವು. ರಂಗರಾವ್ ಮೊದಲಬಾರಿಗೆ ಎದುರಾಳಿಯೊಬ್ಬನ ಮಾತುಗಳಿಗೆ ಬೆರಗಾಗಿದ್ದರು.

ಇದಾಗಿ ಒಂದು ತಿಂಗಳಾಗಿತ್ತು. ಒಂದು ದಿನ ಸಂಜೆ ಐದು ಗಂಟೆಯಲ್ಲಿ ರಂಗರಾವ್ ಎಸ್ಪಿ ವೈ.ಎಸ್.ರೆಡ್ಡಿ ಜೊತೆಯಲ್ಲಿ ಆಫೀಸಿನಿಂದ ಎಸ್ಪಿಯವರ ಕಾರಿನಲ್ಲಿ ಜಂಗಲ್ ಪೊಲೀಸ್ ಸ್ಟೇಷನ್ ಕಡೆ ಹೋಗುತ್ತಿದ್ದರು. ಗನ್ ಮ್ಯಾನುಗಳಾಗಲಿ, ಇತರೆ ಸಿಬ್ಬಂದಿಯಾಗಲೀ ಇರಲಿಲ್ಲ. ರಂಗರಾವ್ ಕಾರು ಚಾಲನೆ ಮಾಡುತ್ತಿದ್ದರು. ಮಧ್ಯೆ ಐದು ಕಿಲೋಮೀಟರ್ ಜಂಗಲ್ ಬರುತ್ತದೆಯಲ್ಲದೆ ರಸ್ತೆಯ ಎರಡೂ ಪಕ್ಕ ದಟ್ಟವಾದ ಪೊದೆಗಳಿದ್ದವು. ಅರ್ಧ ಜಂಗಲ್ ರಸ್ತೆ ಸವೆದಿರಬೇಕು; ಇದ್ದಕ್ಕಿದ್ದಂತೆ ಯುವಕನೊಬ್ಬ ಪೊದೆಯೊಳಗಿಂದ ಚಂಗನೆ ರಸ್ತೆಯ ಮಧ್ಯಕ್ಕೆ ನೆಗೆದು ನಿಂತ. ರಂಗರಾವ್ ಅಪಾಯದ ಮುನ್ಸೂಚನೆ ಸಿಕ್ಕಿ ಕೂಡಲೇ ಕಾರು ನಿಲ್ಲಿಸಿ ಆ ಯುವಕನನ್ನು ಹಿಡಿಯಲು ಹೋಗಿದ್ದರು. ತಲೆಗೆ ಟವಲ್ ಸುತ್ತಿಕೊಂಡಿದ್ದ ಯುವಕ ಹಿಂದೆ ಸೊಂಟಕ್ಕೆ ಸಿಗಿಸಿಕೊಂಡಿದ್ದ ಹರಿತವಾದ ಮಚ್ಚನ್ನು ಕೈಗೆತ್ತಿಕೊಂಡಿದ್ದ. ರಂಗರಾವ್ ಆ ಯುವಕನ ಕತ್ತನ್ನು ಬಲಗೈನಲ್ಲಿ ಲಾಕ್ ಮಾಡಲು ಪ್ರಯತ್ನಿಸಿದರು. ಕ್ಷಣಮಾತ್ರದಲ್ಲಿ ಆ ಯುವಕ ರಂಗರಾವ್ ಅವರ ಎಡಗೈಯನ್ನು ಮೊಣಕೈವರೆಗೆ ಕತ್ತರಿಸಿ, ಕತ್ತರಿಸಿದ ಕೈ ಸಮೇತ ಪೊದೆಗೆ ಜಿಗಿದು ಚಿರತೆಯಂತೆ ಮಾಯವಾಗಿದ್ದ.

ರಂಗರಾವ್ ಆ ಯುವಕನ ಗುರುತು ಸಿಕ್ಕಿತು. ತನ್ನಿಂದ ಜಂಗಲ್ ಪೊಲೀಸ್ ಸ್ಟೇಷನ್ನಿನಲ್ಲಿ ಶಿಶ್ನದ ರಂಧ್ರಕ್ಕೆ ತಾಮ್ರದ ತಂತಿಯನ್ನು ತೂರಿಸಿಕೊಂಡಿದ್ದ ಯುವಕ! ಆ ಯುವಕನಿಗೆ ಬೇಲ್ ಕೊಡಿಸಿದ್ದ ನರಸಿಂಹ ನಾಯ್ಡು ಹೇಳಿದ್ದ 'boomerang' ಎನ್ನುವ ಪದ ಮುಖಕ್ಕೆ ರಪ್ಪನೆ ಅಪ್ಪಳಿಸಿದಂತಾಗಿ ರಂಗರಾವ್ ಸ್ಮೃತಿ ತಪ್ಪಿದ್ದರು. ಎಚ್ಚರವಾದಾಗ ಲೈಫ್ ಹಾಸ್ಪಿಟಲ್‌ನ ಐಸಿಯುವಿನಲ್ಲಿ ಮಲಗಿದ್ದರು. ಸದ್ಯಕ್ಕೆ ಪ್ರಾಣಾಪಾಯದಿಂದ ಪಾರಾಗಿದ್ದರು.

ನಕ್ಸಲ್ ಎನ್‌ಕೌಂಟರ್ ವೇಳೆ ಕೈ ಕಳೆದುಕೊಂಡ ಟೆರರ್ ಆಫೀಸರ್ ರಂಗರಾವ್ ಎಂಬ ಸುದ್ದಿ ಚಾನಲ್ಲುಗಳಲ್ಲಿ ಬ್ರೇಕಿಂಗ್ ನ್ಯೂಸ್ ಆಗಿ ಬಿತ್ತರವಾಗುತ್ತಿತ್ತು. ಡಿಜಿಪಿಯಿಂದ ಹಿಡಿದು ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳು ಬಂದು ಆರೋಗ್ಯ ವಿಚಾರಿಸಿಕೊಂಡು ಹೋಗಿದ್ದರು. ಎಸ್ಪಿ ವೈ.ಎಸ್. ರೆಡ್ಡಿ, 'ರಂಗರಾವ್, ಅವನ ದೇಹವನ್ನು ಚೂರು ಚೂರು ಮಾಡುವವರೆಗೂ ನಾನು ನಿದ್ರಿಸುವುದಿಲ್ಲ. ನಕ್ಸಲರ ಬುಡವನ್ನು ಬೇರು ಸಮೇತ ಕಿತ್ತು ಬಿಸಾಕುವವರೆಗೂ ನಾನು ವಿರಮಿಸುವುದಿಲ್ಲ' ಎಂದು ರೋಷ ಕಕ್ಕಿದ್ದರು. ಮೂರು ತಿಂಗಳ ವಿಶ್ರಾಂತಿಯ ನಂತರ ಬಂದು ಡ್ಯೂಟಿಗೆ ಸೇರಿಕೊಂಡ ದಿನವೇ ರಂಗರಾವ್‌ಗೆ ಎಸ್ಪಿಯಾಗಿ ಪ್ರಮೋಷನ್ ಆಗಿ ಅದಿಲಾಬಾದ್ ಜಿಲ್ಲೆಗೆ ವರ್ಗಾವಣೆಯಾಗಿತ್ತು.

ಕತ್ತರಿಸಿ ಹೋಗಿದ್ದ ಎಡಗೈಗೆ ಕೃತಕ ಕೈಯ್ಯನ್ನು ಜೋಡಿಸಲಾಗಿತ್ತು. ರಂಗರಾವ್ ಅದಿಲಾಬಾದ್‌ಗೆ